| PUBLICATION NAME : | Bharath Sarathi |
| --- | --- |
| DATE : | 01/03/2025 |
| PAGE : | 02 |

# ಇಡಿಐಐನಿಂದ ಉದ್ಯಮಶೀಲತೆಯ 16ನೇ ದ್ವೈವಾರ್ಷಿಕ ಸಮ್ಮೇಳನ ಆಯೋಜನೆ

ಅಹಮದಾಬಾದ್: ಅಹಮದಾಬಾದ್‌ನ ಆಂತ್ರಪ್ರಿನ್ಯೂರ್‌ಶಿಪ್ ಡೆವಲಪ್ ಮೆಂಟ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ (ಇಡಿಐಐ)ನ 16ನೇ ದ್ವೈವಾರ್ಷಿಕ ಸಮ್ಮೇಳನ (3 ದಿನಗಳು) ಫೆಬ್ರವರಿ 26ರಂದು ಸಂಸ್ಥೆಯ ಕ್ಯಾಂಪಸ್ ನಲ್ಲಿ ಪ್ರಾರಂಭವಾಯಿತು. 'ಉದ್ಯಮಶೀಲತೆ' ಕುರಿತಾದ ಈ ಮೂರು ದಿನಗಳ ಸಮ್ಮೇಳನವು ಫೆಬ್ರವರಿ 28ರಂದು ಸಮಾರೋಪಗೊಳ್ಳಲಿದೆ. ಈ ಸಮ್ಮೇಳನವು ಸಂಶೋಧಕರು, ಶಿಕ್ಷಣ ತಜ್ಞರು ಮತ್ತು ಅಭ್ಯಾಸಿಗಳಿಗೆ ಉದ್ಯಮಶೀಲತೆಯ ಅಭಿವೃದ್ಧಿಯ ವಿವಿಧ ಕ್ಷೇತ್ರಗಳ ಕುರಿತಾದ ಅವರ ಸಂಶೋಧನೆಯ ಅಧ್ಯಯನಗಳು ಮತ್ತು ಫಲಿತಾಂಶಗಳನ್ನು ಹಂಚಿಕೊಳ್ಳಲು ವೇದಿಕೆಯಾಗಿದೆ. ಇಡಿಐಐ 1994ರಿಂದಲೂ ಈ ದ್ವೈವಾರ್ಷಿಕ ಸಮ್ಮೇಳನವನ್ನು ಆಯೋಜಿಸುತ್ತಿದೆ. ಈ ಸಮ್ಮೇಳನದ ಸಂದರ್ಭದಲ್ಲಿ ಉದ್ಯಮಶೀಲತೆಯ




ತತ್ವ ಮತ್ತು ರೂಢಿ, ಉದ್ಯಮಶೀಲತೆಯ ಶಿಕ್ಷಣ, ಉದ್ಯಮಶೀಲತೆಯ ವ್ಯವಸ್ಥೆ, ಮನಃಶಾಸ್ತ್ರ ಮತ್ತು ಉದ್ಯಮಶೀಲತೆ, ಎಂ.ಎಸ್.ಎಂ.ಇ.ಉದ್ಯಮಶೀಲತೆ, ತಂತ್ರಜ್ಞಾನ ಮತ್ತು ಡಿಜಿಟಲ್ ಉದ್ಯಮಶೀಲತೆ, ಸ್ಟಾರ್ಟಪ್ ಮತ್ತು ಆವಿಷ್ಕಾರ, ಹಸಿರು ಮತ್ತು ಸುಸ್ಥಿರ ಉದ್ಯಮಶೀಲತೆ, ಸಾಮಾಜಿಕ ಉದ್ಯಮಶೀಲತೆ, ಸಂಸ್ಕೃತಿ, ಸಂಪ್ರದಾಯ ಮತ್ತು ಮೌಲ್ಯಾಧಾರಿತ ಉದ್ಯಮಶೀಲತೆ, ಮಹಿಳಾ ಉದ್ಯಮಶೀಲತೆ, ಗ್ರಾಮೀಣ ಉದ್ಯಮಶೀಲತೆ ಮತ್ತು ಹೊಸತನದ ಉದ್ಯಮಶೀಲತೆ ಮತ್ತು ಹೊಸ ಉದ್ಯಮ ಸೃಷ್ಟಿ ಹಾಗೂ ಕುಟುಂಬ ವ್ಯವಹಾರಗಳ ಕುರಿತಾದ 9 ದೇಶಗಳ ವಿದ್ವಾಂಸದಿಂದ 148 ಸಂಶೋಧನಾ ಪ್ರಬಂಧಗಳು ಮತ್ತು ಅಧ್ಯಯನಗಳನ್ನು ಮಂಡಿಸಲಾಯಿತು.

ಈ ಸಮ್ಮೇಳನವನ್ನು ಅಹಮದಾಬಾದ್ ನ ಟಿ.ವಿ.ರಾವ್ ಲರ್ನಿಂಗ್ ಸಿಸ್ಟಮ್ಸ್ ಪ್ರೈ.ಲಿ.ಯ ಸಂಸ್ಥಾಪಕ ಮತ್ತು ಅಧ್ಯಕ್ಷ ಹಾಗೂ ಅಹಮದಾಬಾದ್ ನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಮಾಜಿ ಪ್ರೊಫೆಸರ್ ಮುಖ್ಯ ಅತಿಥಿ ಪ್ರೊ.(ಡಾ.)ಟಿ.ವಿ. ರಾವ್ ಉದ್ಘಾಟಿಸಿದರು. ಅವರು, "ಇಂದಿನ ವೇಗದ ಗತಿಯ ಅರ್ಥವ್ಯವಸ್ಥೆಯಲ್ಲಿ ಉದ್ಯಮಶೀಲತೆಯ ಅಭಿವೃದ್ಧಿಯು ಆರ್ಥಿಕ ಪ್ರಗತಿ ಮತ್ತು ವೃತ್ತಿಪರ ಮುಂದುವರಿಕೆಗೆ ಅತ್ಯಂತ ಮುಖ್ಯವಾಗಿದೆ. ಉದ್ಯಮಶೀಲತೆಯು ಒಂದು ಧ್ಯೇಯ, ಶಕ್ತಿಯುತ ಬಲವಾಗಿದ್ದು ಅದರಲ್ಲಿ ವ್ಯಕ್ತಿಗಳು ತಂತ್ರಜ್ಞಾನ ಮತ್ತು ಆವಿಷ್ಕಾರವನ್ನು ಬಳಸಿ ನಿಜ ಜೀವನದ ಸಮಸ್ಯೆಗಳನ್ನು ಪರಿಹರಿಸುವ ಮೂಲಕ ಎಲ್ಲರಿಗೂ ಉತ್ತಮ ಭವಿಷ್ಯ ಸೃಷ್ಟಿಸುತ್ತಾರೆ. ಈ ಕ್ಷೇತ್ರದ ಪ್ರಾಮುಖ್ಯತೆಯಿಂದ ಉದ್ಯಮಶೀಲತೆಯ ಉತ್ತೇಜನಕ್ಕೆ ನಿಯಮಿತ ಸಂಶೋಧನೆ ಮತ್ತು ನೀತಿಯ ವಕ್ತಾರಿಕೆ ಕೈಗೊಳ್ಳುವುದು ಬಹಳ ಮುಖ್ಯವಾಗಿದೆ. ಇದು ವಿಶಿಷ್ಟ ವೇದಿಕೆಯಾಗಿದ್ದು ಈ ಸಮ್ಮೇಳನದ ಫಲಿತಾಂಶಗಳು ಉದ್ಯಮಶೀಲತೆಯ